೧೦–೩೦ ಪಿ. ಎಂ.

ಇದೆಲ್ಲಾ ಗೊತ್ತಿದೆಯೋ ಗೊತ್ತಿಲ್ಲವೋ ತಿಳಿಯದು. ಇದಕ್ಕೆ ಸಂಬಂಧಪಟ್ಟಿರತಕ್ಕಂತಹ ಚಕ್ರಾ ಯೋಜನೆಯಲ್ಲಿ ಡ್ಯಾಂ ಅನ್ನು ಕಟ್ಟಿದ್ದಾರೆ. ಅಲ್ಲಿಕೂಡ ಒಂದು ಆಡಿ ಬಿರುಕು ಬಿಟ್ಟಿದೆ. ಅಲ್ಲಿಗೆ ಸಾರ್ವಜನಿಕರನ್ನು ನೋಡಲು ಬಿಡುತ್ತಿಲ್ಲ, ಶಾಸಕರು ಹೋದರೂ ಕೂಡ ಬಿಡುವುದಿಲ್ಲ. ನಾನೂ ಕೂಡ ನೋಡಲು ಹೋದಾಗ ಬಿಡದೆ ವಾಪಸ್ ಬಂದಿದ್ದೇನೆ. ಇದು ದೊಡ್ಡ ಸ್ಕ್ಯಾಂಡಲ್ ಆಗಿದೆ. ವಿದ್ಯುತ್ತನ್ನು ಉತ್ಪಾದನೆ ಮಾಡುತ್ತೇವೆಂದು ಹೇಳಿದಿರಿ, ಅಲ್ಲಿ ವಿದ್ಯುಚ್ಛಕ್ತಿಯನ್ನೂ ಕೂಡ ಉತ್ಪಾದನೆ ಮಾಡಲಿಲ್ಲ. ನೀರನ್ನು ಏಕೆ ಇಳಿಸಿದ್ದಾರೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಅಲ್ಲಿ ಸ್ವಲ್ಪ ನೀರು ಹೋಗುತ್ತಿತ್ತು ಸರಕಾರ ಗಮನಹರಿಸಿ ಎಕ್ಸ್‌ಪರ್ಟ್ಸ್ ಅನ್ನು ಆ ಡ್ಯಾಮಿಗೆ ಕಳಿಸಿ ಅಲ್ಲಿ ಏನಾದರೂ ಅಪಾಯ ಇದೆಯೇ ಎಂದು ಈಗಾಗಲೇ ಕೂಲಂಕುಷವಾಗಿ ತನಿಖೆ ಮಾಡಿಸಿದ್ದೇವೆ. ಅವರ ಅಭಿಪ್ರಾಯದ ಪ್ರಕಾರ ಆ ಡ್ಯಾಮಿಗೆ ಯಾವುದೇ ರೀತಿಯ ಅಪಾಯವಿಲ್ಲ. ಅಲ್ಲಿ ಹತ್ತು ಆಡಿ ನೀರು ಕಡಿಮೆಯಾಗಿದೆ. ಆದು ತುಂಬಬೇಕು. ಆದನ್ನು ನಾವು ಕಡಿಮೆ ಮಾಡತಕ್ಕಂತಹ ಪ್ರಶ್ನೆ ಬರುವುದಿಲ್ಲ ಮುಳಿಗಾಲದಲ್ಲಿ ಇದು ತುಂಬಬಹುದು. ರಿಸರ್ವಾಯರ್‌ನಲ್ಲಿ ಎಲ್ಲ ವ್ಯವಸ್ಥೆಯನ್ನು ಮಾಡಲಾಗಿದೆ.

ಶ್ರೀ ಪಟಮಕ್ಕಿ ರತ್ನಾಕರ್.—ಇದು ಉತ್ತರ ಅಲ್ಲ.

ಶ್ರೀ ಲಕ್ಷ್ಮೀನರಸಿಂಹಯ್ಯ.—ನನಗೆ ಗಂಟಲಿನ ತೊಂದರೆ ಇದೆ, ಆದರೂ ಗಂಟಲು ಸರಿ ಮಾಡಿ ಕೊಂಡು ಉತ್ತರ ಹೇಳುತ್ತಿದ್ದೇನೆ. ವೊಲ್ಟೇಜ್ ನನಗೆ ಕಡಿಮೆಯಾಗಿದೆ. ಈಗ ಲಕ್ಕಪ್ಪನವರ ಹಸ್ತಿರ ಮಾತನಾಡಿ ಇನ್ನೂ ಕಡಿಮೆಯಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳಿಗೆ ವೊಲ್ಟೇಜ್ ಕಡಿಮೆ ಯಾಗಿದೆ ಎಂದು ಹೇಳುತ್ತಿದ್ದಾರೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಆ ಡ್ಯಾಂ ಬಗ್ಗೆ ಆತಂಕ ಪಡಬೇಕಾಗಿಲ್ಲ ಅಂತಹ ಪರಿಸ್ಥಿತಿ ಇಲ್ಲ. ನಿಮ್ಮ ಮಸ್ಸಿಗೆ ನೆಮ್ಮದಿ ತಂದು ಕೊಡಲಿಕ್ಕೆ ಈ ವಿಧಿವಿಶನ ಮುಗಿದ ತಕ್ಷಣ ಸ್ಥಳೀಯ ಶಾಸಕರ ತಂಡವನ್ನು ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆ. ಇದು ಸಾರ್ವಜನಿಕರ ಹಿತದೃಷ್ಟಿಯಿಂದ ಮಾಡಿರತಕ್ಕಂತಹ ಡ್ಯಾಂ. ಇದನ್ನು ತಾವು ಹಸ್ತಿರದಿಂದ ನೋಡಬೇಕಾದುದು ಅವಶ್ಯ ಇದೆ.

ಶ್ರೀ ಪಟಮಕ್ಕಿ ರತ್ನಾಕರ್.—ಅಲ್ಲಿಗೆ ತನಿಖಾ ತಂಡವನ್ನು ಕಳಿಸುತ್ತೀರಾ

ಬಣ್ಣದ ಗ್ರಾನೈಟ್ ಕಲ್ಲಿನ ಅಕ್ರಮ ವ್ಯವಹಾರದ ಬಗ್ಗೆ

೧೫೫(ಟಿ೫೫) ಶ್ರೀ ಯು. ಭೂಪತಿ.(ಸಂಡೂರು) —ಮಾನ್ಯ ಕಣ್ಣು ಪ್ರಮಾಣದ ಉದ್ಯಮ ಗಳು ಹಾಗೂ ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಬಣ್ಣದ ಗ್ರಾನೈಟ್(ಕಲ್ಲನ್ನು) ಅಕ್ರಮವಾಗಿ ಹಲವಾರು ಜನ ರಫ್ತು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಗ್ರಾನೈಟ್ ಕಲ್ಲಿನ ಅಕ್ರಮ ವ್ಯವಹಾರವನ್ನು ತಡೆಯಲು ಸರ್ಕಾರದ ಯೋಜನೆಯೇನು ?

ಇ) ಅಕ್ರಮ ವ್ಯವಹಾರಗಳಲ್ಲಿ ತೊಡಗಿದವರ ವಿರುದ್ಧ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ?

ಶ್ರೀ ರಮೇಶ್ ಸಿ. ಜಿಗಜಿಣಗಿ(ಕಣ್ಣು ಪ್ರಮಾಣದ ಕೈಗಾರಿಕೆ ಹಾಗೂ ಗಣಿ ಮತ್ತು ಭೂವಿಜ್ಞಾನ ಸಚಿವರು).—

ಅ) ಬಂದಿದೆ.

ಆ) ಸರ್ಕಾರದ ಜಮೀನುಗಳಲ್ಲಿ ಅಕ್ರಮವಾಗಿ ನಡೆದಿರುವ ಗ್ರಾನೈಟ್ ಬ್ಲಾಕ್‌ಗಳನ್ನು ಜಪ್ತಿ ಮಾಡಲಾಗಿದೆ ಮತ್ತು ಸರ್ಕಾರಿ ಸಂಸ್ಥೆಯ ಸಂಸ್ಥೆಗೆ ಅವುಗಳನ್ನು ವಿಲೇವಾರಿ ಮಾಡಲಾಗಿದೆ.

ಇ) ಅಕ್ರಮ ವ್ಯವಹಾರಗಳಲ್ಲಿ ತೊಡಗಿದವರ ಮೇಲೆ ನ್ಯಾಯಲಯಗಳಲ್ಲಿ ಮೊಕದ್ದಮೆಗಳನ್ನು ಹೂಡಲಾಗಿದೆ.

ಶ್ರೀ ಯು. ಭೂಪತಿ.—ಗ್ರಾನೈಟ್ ಕಲ್ಲಿನ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಇಲ್ಲಿಯವರೆಗೆ ಬಣ್ಣದ ಗ್ರಾನೈಟ್ ಕಲ್ಲು ಅಕ್ರಮವಾಗಿ ರಫ್ತಾಗುತ್ತಿರುವುದು ಏನು ಸರ್ಕಾರದ ಗಮನಕ್ಕೆ ಬಂದಿದೆ, ಹಾಗೂ ಸರಕಾರೀ ಜಮೀನಿನಲ್ಲಿ ಅಕ್ರಮವಾಗಿ ನಡೆದಿರುವ ಗ್ರಾನೈಟ್ ಬ್ಲಾಕ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದು ಸರಕಾರ ಒಪ್ಪಿಕೊಂಡಿದೆ. ಇದನ್ನು ಸರಕಾರ ಒಪ್ಪಿಕೊಂಡ ಮೇಲೆ ಇದರಿಂದ ಸರಕಾರದ ಖಜಾನೆಗೆ ಎಷ್ಟು ಕೋಟಿ ರೂಪಾಯಿ ಬರಬೇಕಾಗಿದೆ. ಯಾವ್ಯಾವ ಕಂಪನಿಗಳು, ವ್ಯಕ್ತಿಗಳು ಇದರಲ್ಲಿ ಇನ್‌ವಾಲ್ವ್ ಆಗಿದ್ದಾರೆ, ಎಂಬುವರ ಪಟ್ಟಿಯನ್ನು ಕೊಡುತ್ತೀರಾ ? ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ಹೂಡಲಾಗಿದೆ ಎಂದು ಹೇಳಿದ್ದೀರಿ, ಎಷ್ಟು ಜನರ ಮೇಲೆ ಹೂಡಿದ್ದೀರಿ ಎಂಬುದನ್ನು ತಿಳಿಸಿ, ಇದನ್ನು ಖಾಸಗಿ ಜಮೀನಿನಲ್ಲೂ ಶುರುಮಾಡಿದ್ದಾರೆ ಇದು ಕೇವಲ ಲಕ್ಷಾಂತರ ರೂಪಾಯಿಯ ವ್ಯವಹಾರ ಅಲ್ಲ, ಇದು ಕೋಟ್ಯಾಂತರ ರೂಪಾಯಿಯ ವ್ಯವಹಾರ. ನನ್ನ ಜಿಲ್ಲೆಯಲ್ಲಿ ನನಗೆ ಗೊತ್ತಿರುವ ಪ್ರಕಾರ ಎರಡು-ಮೂರು ಕಡೆಗಳಲ್ಲಿ ಇದು ನಡೆಯುತ್ತಿದೆ. ಇದು ಇಡೀ ರಾಜ್ಯದ ಎಲ್ಲಾ ಕಡೆಯಲ್ಲೂ ಕೂಡಾ ನಡೆಯುತ್ತಿದೆ. ಇದು ಸರ್ಕಾರಿ ಜಮೀನಿನಲ್ಲಿರತಕ್ಕಂಥ ಗ್ರಾನೈಟ್ ಪ್ರಶ್ನೆ ಆಯ್ತು.ಖಾಸಗಿ ಜಮೀನಿನಲ್ಲಿರತಕ್ಕಂಥ ಗ್ರಾನೈಟ್ ಪ್ರಶ್ನೆಯೂ ಸಹಾ ಇದರಲ್ಲಿ ಇದ್ದು ಇದು ಇಡೀ ರಾಷ್ಟ್ರಕ್ಕೆ ಸೇರಿದ ಆಸ್ತಿಯಾಗಿದೆ. ಇದನ್ನು ತಾವು ನ್ಯಾಷನಲೈಸ್ ಮಾಡುತ್ತೀರಾ ? ಮತ್ತು ಇದನ್ನು ಯಾವ ರೀತಿ ನಡೆಸಿಕೊಂಡು ಹೋಗುತ್ತೀರಿ ಎನ್ನುವುದನ್ನು ತಾವು ವಿವರವಾಗಿ ಹೇಳಬೇಕು.

ಶ್ರೀ ರಮೇಶ್ ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ ಪ್ರಕಾರ ಈ ಇಲ್ಲೀಗಲ್ ಕ್ವಾರಿ ಬಗ್ಗೆ ನಡೆಯುತ್ತಿರತಕ್ಕಂಥ ಅಕ್ರಮದ ವ್ಯವಹಾರ ಸರ್ಕಾರದ ಗಮನಕ್ಕೆ ಬಂದಿದೆ. ಸುಮಾರು ಲಕ್ಷಾಂತರ ರೂಪಾಯಿಗಳು ಸರ್ಕಾರಕ್ಕೆ ಬರತಕ್ಕಂಥ ಆದಾಯ ಬಂದಿಲ್ಲ. ಇದಕ್ಕೆಲ್ಲಾ ಹೊಣೆ ಸರ್ಕಾರ ಅಲ್ಲ ಎನ್ನತಕ್ಕಂಥ ಮಾತನ್ನು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ. ಇಡೀ ಕರ್ನಾಟಕ ರಾಜ್ಯದಲ್ಲಿ ಇರತಕ್ಕಂಥ ಆದರಲ್ಲೂ ಓಲ್ಡ್ ಮದ್ರಾಸ್ ಏರಿಯಾದಲ್ಲಿ ಇದನ್ನು ತಡೆಯಲಿಕ್ಕೆ ಸರ್ಕಾರಕ್ಕೆ ಯಾವುದೇ ಅಧಿಕಾರ ಇಲ್ಲವೆಂದು ಸುಮಾರು ಆರು ಜನರು ಹೈಕೋರ್ಟ್‌ಗೆ ಹೋಗಿ ಆಲ್ಲಿಂದ ತಡೆ ಆಜ್ಞೆ ತಂದಿದ್ದಾರೆ. ಇದು ಆದಮೇಲೆ ಇಷ್ಟೊಂದು ಇಲ್ಲೀಗಲ್ ಕ್ವಾರಿಯನ್ನು ಹೆಗೆಯುತ್ತಿರುವುದು ನಿಜ. ಇದನ್ನು ತಡೆಯಬೇಕೆಂದು ನಾವು ಸಂಪೂರ್ಣವಾಗಿ ಪ್ರಯತ್ನ ಮಾಡುತ್ತಿದ್ದೇವೆ. ಇದರ ಬಗ್ಗೆ ಈಗಾಗಲೇ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಮತ್ತು ಅಲ್ಲಿರತಕ್ಕಂಥ ತಹಶೀಲ್ದಾರ್‌ರಿಗೆ ನಾವು ಸರ್ಕಾರದಿಂದ ಪತ್ರವನ್ನು ಸಹಿತ ಬರೆದಿದ್ದೇವೆ. ಆದಲ್ಲದೇ ಸುಮಾರು ೧೧೮ ಪ್ರಕರಣಗಳ ಬಗ್ಗೆ ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ನಾವು ಈಗಾಗಲೇ ಹೂಡಿದ್ದೇವೆ. ಎಂದು ಹೇಳಲಿಕ್ಕೆ ಬಯಸುತ್ತೇನೆ. ಮತ್ತು ಮಾನ್ಯ ಸದಸ್ಯರು ಯಾರ್ಯಾರು ಇಲ್ಲೀಗಲ್ ಕ್ವಾರಿಯನ್ನು ಶಿಫಿಯುತ್ತಿದ್ದಾರೆ, ಅವರುಗಳ ಪಟ್ಟಿ ಬೇಕು ಎಂದು ಕೇಳಿದ್ದಾರೆ, ನಮ್ಮ ಮುಂದೆ ಈಗ ಯಾವ ಪಟ್ಟಿ ಇದೆ, ಆ ಪಟ್ಟಿಯನ್ನೂ ಸಹಿತ ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ. ಇನ್ನೊಂದು ವಿಚಾರವನ್ನು ಮಾನ್ಯ ಸದಸ್ಯರು ಎತ್ತಿದ್ದಾರೆ, ಅದೇನೆಂದರೆ ಇದನ್ನು ರಾಷ್ಟ್ರೀಕರಣ ಮಾಡುತ್ತೀರಾ ಹೇಗೆ ಎಂದು ಕೇಳಿದ್ದಾರೆ. ಆದರೆ ಇದನ್ನು ನ್ಯಾಷನಲೈಸ್ ಮಾಡಬೇಕೋ ಆಥವಾ ನಿಯಮವನ್ನು ರಿಬರ್‌ಲೈಸ್ ಮಾಡಬೇಕೊ ಎನ್ನತಕ್ಕಂಥದ್ದನ್ನು ನಾವು ಇನ್ನೂ ಸಂಪೂರ್ಣವಾಗಿ ಇದರ ಬಗ್ಗೆ ತೀರ್ಮಾನವನ್ನು ಮಾಡಿಲ್ಲ. ಇದರ ಬಗ್ಗೆ ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಒಂದು ಸಭೆಯನ್ನು ಕರೆದು ಕೂಲಂಕಷವಾಗಿ ಮಾತನಾಡಿದ್ದಾರೆ. ಇದನ್ನು ನ್ಯಾಷನಲೈಸ್ ಮಾಡಬೇಕೋ ಆಥವಾ ರಿಬರ್‌ಲೈಸ್ ಮಾಡಬೇಕೋ ಎನ್ನುವ ಬಗ್ಗೆ ಸಂಪೂರ್ಣವಾದಂಥ ಯಾವುದೇ ಒಂದು ನಿರ್ಧಿಷ್ಟವಾದಂಥ ವಿಚಾರಕ್ಕೆ ನಾವು ಇನ್ನೂ ಬಂದಿಲ್ಲ. ಇದರ ಬಗ್ಗೆ ಸಾಧ್ಯವಾದರೆ ಸ್ವಲ್ಪ ದಿನಗಳಲ್ಲಿ ತೀರ್ಮಾನವನ್ನು ಮಾಡುತ್ತೇವೆ ಎಂಬ ಮಾತನ್ನು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ.

ಶ್ರೀ ಯು. ಭೂಪತಿ.—ಮಾನ್ಯ ಸಚಿವರು ಇದರ ಬಗ್ಗೆ ಹಿಂದೆ ಇನ್ನು ಮೇಲೆ ಗ್ರಾನೈಟ್ ವ್ಯವಹಾರವನ್ನು ನಾವು ಮೈಸೂರು ಮಿನರಲ್ಸ್ ಲಿಮಿಟೆಡ್ ಕಂಪನಿಗೆ ವಹಿಸಿಕೊಡುತ್ತೇವೆ ಎಂದು ಹೇಳಿದ್ದರು. ಆದ್ದರಿಂದ ನೀವು ಮೈಸೂರು ಮಿನರಲ್ಸ್ ಕಂಪನಿಗೆ ವಹಿಸಿಕೊಟ್ಟಿದ್ದೀರಾ ? ಆ ರೀತಿ ವಹಿಸಿಕೊಟ್ಟಿದ್ದರೆ ತಮ್ಮವರು ಇಷ್ಟರಿಯವರೆಗೂ ಎಷ್ಟು ವ್ಯವಹಾರವನ್ನು ಮಾಡಿದ್ದಾರೆ ? ಇದರಲ್ಲಿ ನಿಮ್ಮ ಅನುಭವವೇನು ? ಇನ್ನೊಂದು ಮುಖ್ಯವಾದ ವಿಚಾರವನ್ನು ಇಲ್ಲಿ ಹೇಳಿದ್ದಾರೆ, ಈ ಓಲ್ಡ್

ಮದ್ರಾಸ್ ಏರಿಯಾದವರ ಬಗ್ಗೆ ಕೋರ್ಟಿನಲ್ಲಿ ಸ್ಟೇ ಇದೆ ಎಂತಲೂ ಹೇಳಿದ್ದೀರಿ, ನೀವು ಈ ರೀತಿ ಹೇಳಿದರೆ ಅವರಿಗೆ ಪುಷ್ಟಿಯನ್ನು ಕೊಟ್ಟ ಹಾಗೆ ಆಗುತ್ತದೆ. ಇದು ಕೋಟ್ಯಾಂತರ ರೂಪಾಯಿ ವ್ಯವಹಾರ. ಕೋಟ್ಯಾಂತರ ರೂಪಾಯಿಯ ಕ್ವಾರಿಯನ್ನು ಅವರು ಆರಾಮವಾಗಿ ಎಕ್ಸ್‌ಪೋರ್ಟ್ ಮಾಡುತ್ತಿದ್ದಾರೆ. ಅವರಿಗೆ ಹೇಳುವವರು ಮತ್ತು ಕೇಳುವವರೂ ಯಾರೂ ಇಲ್ಲ. ನೀವು ಡಿ.ಸಿ. ಅವರಿಗೆ ಲೆಟರ್‌ನ್ನು ಬರೆದಿದ್ದರೆ they do not care the DCs. ಇದರ ಬಗ್ಗೆ ಬೇಕು ಅಥವಾ ಬೇಡ ಎಂದು ಅರ್ಧ ರಾಜಿ ಮಾಡಿಕೊಳ್ಳುವ ರೀತಿಯಲ್ಲಿ ಮಾತನಾಡಿದರೆ ಆಗುವುದಿಲ್ಲ Basically you have no will power at all. you say that this is your stand that you are not going to allow anybody to quarry colour granite, which is a costly material. If you have guts to say it, you say it.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಸರ್ಕಾರದ ಗಟ್ಸ್ ಬಗ್ಗೆ ಪ್ರಶ್ನೆ ಮಾಡತಕ್ಕಂಥ ಮಾತು ಬೇಡ.

ಶ್ರೀ ಯು. ಭೂಪತಿ.—ಸರ್ಕಾರ ನಿಮ್ಮ ಕೈಯಲ್ಲಿದೆ.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ, ಇಲ್ಲಿ ಯಾವ ಮುಚ್ಚುಮರೆಯನ್ನೂ ನಾವು ಮಾಡಿಲ್ಲ. ನಾವು ಯಾರ ಜೊತೆಯಲ್ಲಿಯೂ ಸಹಾ ಕೂಡಿಕೊಂಡಿಲ್ಲ. ಇದರ ಬಗ್ಗೆ ಸಾಧ್ಯವಾದಷ್ಟು ಮಟ್ಟಿಗೆ ಎಷ್ಟು ಬೇಗ ಇದನ್ನು ಸಂಪೂರ್ಣವಾಗಿ ತಡೆಯಲಿಕ್ಕೆ ಏನೇನು ಕಾಯ್ದೆಯಲ್ಲಿ ತಿದ್ದುಪಡಿಗಳನ್ನು ಮಾಡಬೇಕೋ ಅದನ್ನು, ನಾವು ಮಾಡುತ್ತಿದ್ದೇವೆ. ಈಗಾಗಲೇ ಇದರ ಬಗ್ಗೆ ತಿದ್ದುಪಡಿಗಾಗಿ ಇದನ್ನು ಲಾ ಡಿಪಾರ್ಟ್‌ಮೆಂಟ್ ಮತ್ತು ಆರ್ಥಿಕ ಇಲಾಖೆಯವರಿಗೂ ಕೂಡಾ ಕಳುಹಿಸಿದ್ದೇನೆ. ಇದರ ಬಗ್ಗೆ ಅಮೆಂಡ್‌ಮೆಂಟ್ ಆದತಕ್ಷಣ ಇನ್ನೊಂದು ವಾರವೋ ಅಥವಾ ಇನ್ನು ೧೫–೨೦ ದಿವಸಗಳಲ್ಲಿ ಇದರ ಬಗ್ಗೆ ಅಮೆಂಡ್‌ಮೆಂಟನ್ನು ಮಾಡಿ ಈಗ ಏನು ಇಲ್ಲೀಗಲ್ ಕ್ವಾರಿಯನ್ನು ತೆಗೆಯುತ್ತಿದ್ದಾರೆ, ಅದನ್ನು ಸಂಪೂರ್ಣವಾಗಿ ತಡೆಗಟ್ಟುತ್ತೇನೆ ಎಂದು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ. ಮತ್ತೊಂದು ಪ್ರಶ್ನೆಯನ್ನು ಮಾನ್ಯ ಸದಸ್ಯರು ಎತ್ತಿದ್ದಾರೆ, ಅದೇನೆಂದರೆ ಎಷ್ಟು ಕ್ವಾರಿಯನ್ನು ಎಕ್ಸ್‌ಪೋರ್ಟ್ ಮಾಡಿದ್ದಾರೆ ಎಂದು ಕೇಳಿದ್ದಾರೆ. ಅದರ ಬಗ್ಗೆ ನನ್ನ ಹತ್ತಿರ ಅಂಕಿ ಸಂಖ್ಯೆ ಇಲ್ಲ. ಮಾನ್ಯ ಸದಸ್ಯರು ಬೇಕಾದರೆ ಅದಕ್ಕೆ ಪ್ರತ್ಯೇಕ ಪ್ರಶ್ನೆಯನ್ನು ಹಾಕಲಿ, ಅದಕ್ಕೆ ಸರಿಯಾದ ಉತ್ತರವನ್ನು ತರಿಸಿಕೊಡುತ್ತೇನೆ.

ಶಹಾಪುರ ತಾಲ್ಲೂಕಿನ ಗೋಗಿ ಗ್ರಾಮದ ನೇಕಾರರಿಗೆ ನಿವೇಶನ ಹಂಚಿಕೆ ಬಗ್ಗೆ

೧೫೬.(೬೫೧) ಶ್ರೀ ಶಿವಶೇಖರಗೌಡ ಶಿರವಾಳ (ಶಹಾಪುರ).—ಮಾನ್ಯ ಸಣ್ಣ ಕೈಗಾರಿಕೆ ಮತ್ತು ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ಶಹಾಪುರ ತಾಲ್ಲೂಕಿನ ಗೋಗಿ ಗ್ರಾಮದ ನೇಕಾರರಿಗೆ ನಿವೇಶನ ಹಂಚುವುದಕ್ಕಾಗಿ ಜಮೀನು ವಶಪಡಿಸಿಕೊಳ್ಳುವ ಬಗ್ಗೆ ಕ್ರಮ ಕೈಕೊಂಡಿದ್ದುದು ನಿಜವಲ್ಲವೆ?

(ಆ) ಹಾಗಿದ್ದಲ್ಲಿ, ವಶಪಡಿಸಿಕೊಳ್ಳಲಾದ ಜಮೀನಿನ ಮಾಲೀಕರಿಗೆ ಹಣ ಪಾವತಿ ಮಾಡಲಾಗಿದೆಯೆ?

(ಇ) ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು?

(ಈ) ಡಚ್ ಯೋಜನೆಯಡಿಯಲ್ಲಿ ಸದರಿ ನೇಕಾರರಿಗೆ ಮನೆಗಳನ್ನು ನಿರ್ಮಿಸಲಾಗಿದೆಯೆ?

(ಉ) ಹಾಗಿದ್ದಲ್ಲಿ, ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ ಹಾಗೂ ಹಂಚಲಾಗಿದೆ?

(ಊ) ಹಾಗಿಲ್ಲದಿದ್ದಲ್ಲಿ, ಕೂಡಲೆ ಆ ಬಗ್ಗೆ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಣ್ಣ ಕೈಗಾರಿಕೆ, ಗಣಿ ಮತ್ತು ಭೂ ವಿಜ್ಞಾನ ಸಚಿವರು).—

(ಅ) ನೇಕಾರರಿಗೆ ನಿವೇಶನ ನೀಡುವ ಸಲುವಾಗಿ ಗುಲ್ಬರ್ಗ ಜಿಲ್ಲೆಯ ಶಹಾಪುರ ತಾಲ್ಲೂಕಿನ ಗೋಗಿ ಗ್ರಾಮದ ಸರ್ವೆ ನಂ. ೪, ೫ ಮತ್ತು ೬ ರಲ್ಲಿ ಒಟ್ಟು ೬ ಎಕರೆ ೩೫ ಗುಂಟೆ ಭೂಮಿಯನ್ನು ಗುರುತಿಸಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಲಿಯವರನ್ನು ಭೂ ಸ್ವಾಧೀನಪಡಿಸಿಕೊಳ್ಳಲು ಕೋರಲಾಗಿರುತ್ತದೆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಲಿಯು ಭೂಮಿಯನ್ನು ತನ್ನ ನಿಯಮಾವಳಿಗನುಸಾರವಾಗಿ ಸ್ವಾಧೀನ ಪಡಿಸಿಕೊಳ್ಳುವುದು.